


ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು
ಈ-ಮೇಲ್: anssird@rediffmail.com
ವೆಬ್‌ಸೈಟ್: **www.sirdmysore.gov.in**
ದೂರವಾಣಿ: 0821-2522902-906, Fax: 0821-2444078




# ಜೀತ ಪದ್ಧತಿ ನಿರ್ಮೂಲನೆ

## ಕಿರು ಹೊತ್ತಿಗೆ


ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು-11

# ಜೀತ ಪದ್ಧತಿ ಕುರಿತು ಸರಳ ಪ್ರಶ್ನೋತ್ತರಗಳು

**ಆರ್.ಯೋಗಾನಂದ ಬಾಬು,** ಬೋಧಕರು (ಕೃಷಿ)
ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು

**ಪ್ರಶ್ನೆ: ಜೀತ ಪದ್ಧತಿ ಎಂದರೇನು?**

**ಉತ್ತರ:** ಜೀತ ಪದ್ಧತಿಯು ಒಂದು ಬಲಾತ್ಕಾರದ ದುಡಿಮೆಯ ಪದ್ಧತಿ. ಇದರಲ್ಲಿ ಸಾಲಗಾರನು ಸಾಲಿಗನಿಂದ ಸಾಲ ಪಡೆದು ಸಾಲವನ್ನು ದುಡಿಮೆಯ ರೂಪದಲ್ಲಿ ತೀರಿಸುತ್ತಾನೆ. ದುಡಿಮೆಯನ್ನು ಸ್ವಂತವಾಗಿ ಅಥವ ತನ್ನ ಕುಟುಂಬದ ಸದಸ್ಯನ ಮೂಲಕ ಮಾಡಬಹುದು ಮತ್ತು ದುಡಿಮೆಯ ಅವಧಿ ನಿರ್ದಿಷ್ಟ ಅಥವಾ ಅನಿರ್ದಿಷ್ಟ ಕಾಲದವರೆಗೆ ಇರಬಹುದು. ಜೀತದಾಳು ದುಡಿಮೆಗಾಗಿ ನ್ಯಾಯಬದ್ಧ ಮಜೂರಿ ಪಡೆಯದೆ ಕೇವಲ ನಾಮ ಮಾತ್ರ ಮಜೂರಿ ಪಡೆಯಬಹುದು. ನಾಮ ಮಾತ್ರ ಮಜೂರಿ ಎಂದರೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನಕ್ಕಿಂತ ಕಡಿಮೆ ಕೂಲಿ ಅಥವಾ ಸರ್ಕಾರ ಕನಿಷ್ಠ ವೇತನ ನಿಗದಿಪಡಿಸದಿದ್ದ ಕಡೆ ಪ್ರಚಲಿತ ಕೂಲಿಗಿಂತ ಕಡಿಮೆ ಕೂಲಿ ಎಂದು ವ್ಯಾಖ್ಯಾನಿಸಬಹುದು. ಸಾಲಗಾರನು ಪಡೆಯುವ ಮುಂಗಡ, ಹಣ ಅಥವ ವಸ್ತುಗಳ ರೂಪದಲ್ಲಿರಬಹುದು ಅಥವ ಸ್ವಲ್ಪ ಭಾಗ ಹಣ ಮತ್ತು ಸ್ವಲ್ಪ ಭಾಗ ವಸ್ತುಗಳ ರೂಪದಲ್ಲಿರಬಹುದು.

**ಪ್ರಶ್ನೆ: ಜೀತ ಪದ್ಧತಿಯಿಂದ ಜೀತದಾಳಿನ ಮೇಲಾಗುವ ಪರಿಣಾಮಗಳೇನು?**

**ಉತ್ತರ:** ಜೀತ ಪದ್ಧತಿಯಲ್ಲಿ ಜೀತದಾಳು ಎಂದರೆ ಜೀತಸಾಲವನ್ನು ಮಾಡುವ ಅಥವಾ ಮಾಡಿರುವ ಅಥವಾ ಮಾಡಿರುವನೆಂದು ತಿಳಿದುಕೊಳ್ಳಲಾದ ಒಬ್ಬ ದುಡಿಮೆಗಾರ. ಇಂತಹ ಜೀತದಾಳು ರಾಷ್ಟ್ರದೆಲ್ಲೆಡೆ ಸಂಚರಿಸುವ ತನ್ನ ಮೂಲಭೂತ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಅಲ್ಲದೆ ಸಾಲ ತೀರುವವರೆಗೆ ಬೇರೆ ಕೆಲಸಕ್ಕೆ ಹೋಗುವ ಸ್ವಾತಂತ್ರ್ಯ ಕಳೆದುಕೊಂಡು ತನ್ನ ಪೂರ್ಣ ಶ್ರಮದ

*ಜೀತ ಆಧುನಿಕ ಕಾಲದ ಗುಲಾಮಿ ಪದ್ಧತಿ*
*ಇದಕ್ಕೆ ಬಡತನ, ಅನಕ್ಷರತೆ, ಅಸ್ಪೃಶ್ಯತೆಯ ಮುಂದುವರಿಕೆ ಕಾರಣ*



ಪ್ರತಿಫಲವನ್ನು ಸಾಲಿಗನಿಗೆ ಒಪ್ಪಿಸಿ ಅತ್ಯಂತ ಹೀನಾಯವಾದ ಬದುಕಿಗೆ ಸಿಲುಕಿಕೊಳ್ಳುತ್ತಾನೆ. ಜೀತದಾಳು ತಾನು ಆರ್ಥಿಕ ಅಥವಾ ಇತರೆ ಸಂಕಷ್ಟದಲ್ಲಿ ಪಡೆದಂತಹ ಅಲ್ಪ ಪ್ರಮಾಣದ ಸಾಲ ಮತ್ತು ಅದರ ಬಡ್ಡಿಯನ್ನು ತೀರಿಸಲು ಇಡೀ ಜೀವನ ದುಡಿಮೆ ಮಾಡಬೇಕಾಗುತ್ತದೆ ಹಾಗೂ ಹಲವು ಪ್ರಕರಣಗಳಲ್ಲಿ ತನ್ನ ಕುಟುಂಬದ ಸದಸ್ಯರನ್ನು ಜೀತಕ್ಕಿಡಬೇಕಾಗುತ್ತದೆ.

**ಪ್ರಶ್ನೆ: ಜೀತ ಪದ್ಧತಿಗೆ ಸಿಲುಕಿಕೊಳ್ಳಲು ಕಾರಣಗಳೇನಿರಬಹುದು?**

**ಉತ್ತರ:** ಜೀತ ಪದ್ಧತಿಗೆ ಬಲಿಯಾಗಲು ತಾನು ಅಥವ ತನ್ನ ಕುಟುಂಬದ ಸದಸ್ಯ ತೆಗೆದುಕೊಂಡ ಮುಂಗಡ ಅಥವಾ ಅದರ ಬಡ್ಡಿ, ಪಡೆದಂತಹ ಆರ್ಥಿಕ ಪ್ರಯೋಜನ, ಸಂಪ್ರದಾಯ ಅಥವಾ ಸಾಮಾಜಿಕ ಒತ್ತಡ, ಉತ್ತರಾಧಿಕಾರದಿಂದ ಬಂದ ನಿರ್ಬಂಧ ಅಥವಾ ನಾನು ಒಂದು ನಿರ್ದಿಷ್ಟ ಜಾತಿ ಅಥವಾ ಸಮುದಾಯದಲ್ಲಿ ಹುಟ್ಟಿರುವುದು ಮುಖ್ಯವಾದ ಕಾರಣಗಳು. ಜೀತದಾಳು ಪಡೆಯುವ ಮುಂಗಡಕ್ಕೆ ದಸ್ತಾವೇಜಿನ ಸಾಕ್ಷಿ ಇರಬಹುದು ಅಥವಾ ಇಲ್ಲದಿರಬಹುದು. ಮೇಲಾಗಿ ನೀಡಿದಂತಹ ಸಾಲ ಜೀತ ಸಾಲವಲ್ಲವೆಂದು ರುಜುವಾತು ಪಡಿಸುವ ಭಾರವು ಸಾಲಿಗನದ್ದಾಗಿರುತ್ತದೆ.

**ಪ್ರಶ್ನೆ: ಜೀತ ಪದ್ಧತಿಯು ಕಾನೂನು ಬಾಹಿರ ಪದ್ಧತಿಯೇ?**

**ಉತ್ತರ:** ನಿಸ್ಸಂದೇಹವಾಗಿ ಹೌದು. ಜೀತ ಪದ್ಧತಿ (ರದ್ದತಿ) ಕಾಯ್ದೆ 1976ರ ಅನ್ವಯ ದಿನಾಂಕ 25–10–1975 ರಿಂದ ಜೀತ ಪದ್ಧತಿಯನ್ನು ರಾಷ್ಟ್ರಾದ್ಯಂತ ರದ್ದುಪಡಿಸಲಾಗಿದ್ದು, ಜೀತದಾಳುಗಳನ್ನು ಜೀತ ಮಾಡುವ ಯಾವುದೇ ಹೊಣೆಯಿಂದ ಮುಕ್ತರನ್ನಾಗಿ ಮಾಡಿದೆ. ಆದುದರಿಂದ ಯಾರಾದರೂ ಜೀತ ಪದ್ಧತಿ ಮೇರೆಗೆ ಸಾಲ ಕೊಡುವುದು ಅಥವಾ ಯಾರನ್ನಾದರೂ ಜೀತದಾಳಾಗಿ

*ಬೇಕಿಲ್ಲ ಜೀತದಾಳಿಗೆ ನಿಮ್ಮ ಅನುಕಂಪ*
*ಬೇಕಿದೆ ನ್ಯಾಯವಾದ ಕೂಲಿ, ಸ್ವತಂತ್ರವಾದ ಬದುಕು*
*ಇದು ಈ ನಾಡಿನ ಕಾನೂನು ಸಹ*

ಅಥವಾ ಬೇರೆ ರೀತಿಯ ಬಲಾತ್ಕಾರದಿಂದ ದುಡಿಮೆ ಮಾಡಲು ಇರಿಸಿಕೊಳ್ಳುವುದು ಕಾನೂನಿನಡಿ ಅಪರಾಧ. ಇಂತಹ ಅಪರಾಧಗಳಿಗೆ ಕಾಯ್ದೆಯಡಿ ಸೆರೆಮನೆವಾಸ ಮತ್ತು ಜುಲ್ಮಾನೆ ದಂಡ ವಿಧಿಸುವ ಅವಕಾಶಗಳಿರುತ್ತದೆ.

**ಪ್ರಶ್ನೆ: ಜಾಗೃತ ಸಮಿತಿ ಎಂದರೇನು? ಮತ್ತು ಇದರ ಕರ್ತವ್ಯಗಳೇನು?**

**ಉತ್ತರ:** ಜಾಗೃತ ಸಮಿತಿ ಎಂದರೆ, ಜೀತಪದ್ಧತಿ (ರದ್ದತಿ) ಕಾಯ್ದೆ 1976ರ ಸೆಕ್ಷನ್ 13ರಡಿ ರಚಿಸಲ್ಪಟ್ಟ ಜಿಲ್ಲಾ ಅಥವಾ ಉಪ ವಿಭಾಗ ಮಟ್ಟದ ಸಮಿತಿ. ಜಿಲ್ಲಾ ಮಟ್ಟದ ಸಮಿತಿಗೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಉಪ ವಿಭಾಗ ಮಟ್ಟದ ಸಮಿತಿಗೆ ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯು ಅನುಸೂಚಿತ ಜಾತಿ ಮತ್ತು ಜನಾಂಗಗಳನ್ನು ಪ್ರತಿನಿಧಿಸುವ ಸದಸ್ಯರುಗಳನ್ನು, ಸಮಾಜಸೇವಕರನ್ನು ಹಾಗೂ ಸರ್ಕಾರಿ ಅಥವಾ ಸರ್ಕಾರೇತರ ಸಂಘ ಸಂಸ್ಥೆಗಳನ್ನು ಮತ್ತು ಆರ್ಥಿಕ ಸಂಸ್ಥೆಗಳನ್ನು ಪ್ರತಿನಿಧಿಸುವ ಸದಸ್ಯರುಗಳನ್ನೊಳಗೊಂಡಿರುತ್ತದೆ.

ಕಾಯಿದೆಯನ್ವಯ ಯಾವುದೇ ಉಪಬಂಧಗಳನ್ನು ಸೂಕ್ತ ರೀತಿಯಲ್ಲಿ ಕಾರ್ಯರೂಪಕ್ಕೆ ತರಲು ಸಲಹೆ ನೀಡುವುದು, ಅಪರಾಧಗಳ ಬಗ್ಗೆ ನಿಗಾ ಇಡುವುದು, ಸಮೀಕ್ಷೆ ಕೈಗೊಳ್ಳುವುದು, ವಿಮುಕ್ತರಾದ ಜೀತದಾಳುಗಳಿಗೆ ಸಾಲದ ಸೌಲಭ್ಯ ಕಲ್ಪಿಸುವುದು, ಆರ್ಥಿಕ ಮತ್ತು ಸಾಮಾಜಿಕ ಪುನರ್ವಸತಿಗೆ ಅವಕಾಶ ಕಲ್ಪಿಸುವುದು ಹಾಗೂ ಯಾವುದೇ ದಾವೆಯಲ್ಲಿ ಜೀತದಾಳುವಿನ ಪರವಾಗಿ ವಕಾಲತ್ತು ವಹಿಸುವುದು ಮುಂತಾದವುಗಳು ಜಾಗೃತ ಸಮಿತಿಯ ಕರ್ತವ್ಯಗಳು. ಜಾಗೃತ ಸಮಿತಿಗಳು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಬೇಕಾದರೆ ಅವುಗಳ ಸದಸ್ಯರುಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಜೀತ ಪದ್ಧತಿ (ರದ್ಧತಿ) ಕಾಯ್ದೆ 1976ರ ಬಗ್ಗೆ ಮನವರಿಕೆ ಮಾಡಿಕೊಡಬೇಕು.

***ಸಾಲದ ಸರಪಳಿ ಬಿಚ್ಚಿ, ಜೀತದ ಹೊರೆ ಇಳಿಸಿ,***
***ಮಾನವೀಯತೆ ಮೆರೆಯಿರಿ....................***



**ಪ್ರಶ್ನೆ: ಜೀತದಾಳುಗಳನ್ನು ಗುರುತಿಸುವಾಗ ಅಥವಾ ಸಮೀಕ್ಷೆ ನಡೆಸುವಾಗ ಯಾವ ಅಂಶಗಳನ್ನು ಗಮನದಲ್ಲಿಡಬೇಕು?**

**ಉತ್ತರ:** ಜೀತದಾಳುಗಳನ್ನು ಗುರುತಿಸುವಾಗ ಶ್ರೀ ಎಸ್.ಆರ್. ಶಂಕರನ್ ರವರು ಆಂಧ್ರಪ್ರದೇಶದಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ ಅವಧಿಯಲ್ಲಿ ರೂಪಿಸಿರುವ ಮಾರ್ಗದರ್ಶನಗಳನ್ನು ಅನುಸರಿಸಬೇಕು. ಈ ಮಾರ್ಗದರ್ಶನದ ಮುಖ್ಯಾಂಶಗಳೇನೆಂದರೆ; ಜೀತದಾಳುಗಳನ್ನು ಗುರುತಿಸುವವರು ಒಂದು ಗ್ರಾಮವನ್ನು ಪ್ರವೇಶಿಸಿದೊಡನೆ ದಲಿತಕೇರಿ ಅಥವಾ ಗಿರಿಜನಕೇರಿಗೆ ಹೋಗಿ ಅಲ್ಲಿಯ ಮುಖಂಡರು ಮತ್ತು ದೊಡ್ಡವರನ್ನು ಕೂಡಿಸಿ ಅವರೆದುರು ಸಮೀಕ್ಷೆಯನ್ನು ಆರಂಭಿಸಬೇಕು. ಸಮೀಕ್ಷೆ ನಡೆಸುವಾಗ ಯಾವುದೇ ಸಂದರ್ಭದಲ್ಲಿ ಜೀತದಾಳುಗಳನ್ನು ಮಾಲೀಕರ ಎದುರು ಪ್ರಶ್ನಿಸಬಾರದು. ಅಗತ್ಯವಿದ್ದಲ್ಲಿ ಮಾಲೀಕರನ್ನು ಪ್ರತ್ಯೇಕವಾಗಿ ಭೇಟಿ ಆಗಿ ಅವರಿಂದ ಮಾಹಿತಿ ಪಡೆಯಬಹುದು. ಮಾಲೀಕರಿಂದ ಪಡೆದ ಮಾಹಿತಿ, ಜೀತದಾಳುವಿನಿಂದ ಪಡೆದ ಮಾಹಿತಿಗಿಂತ ವಿಭಿನ್ನವಾಗಿದ್ದಲ್ಲಿ, ಮಾಲೀಕರಿಂದಲೇ ಆ ಹೇಳಿಕೆಗಳ ಬಗ್ಗೆ ರುಜುವಾತು ಪಡೆಯಬೇಕು; ಜೀತದಾಳುಗಳಿಂದಲ್ಲ. ಅಧಿಕಾರಿಗಳು ತನಿಖೆ ನಡೆಸುವಾಗ ಆ ಪ್ರದೇಶದಲ್ಲಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು ಅಥವಾ ದಲಿತ, ಗಿರಿಜನ, ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳನ್ನು ಕರೆದುಕೊಂಡು ಎಲ್ಲರೆದುರು ತನಿಖೆ ಮಾಡಬೇಕೇ ಹೊರತು ಗೌಪ್ಯವಾಗಲ್ಲ. ಜೀತದಾಳಿಗೆ ಸಮಂಜಸವಾದ ಪ್ರಶ್ನೆಗಳನ್ನು ಕೇಳಿ ಅವನಿಂದ ಬಂದ ಉತ್ತರಗಳನ್ನು ಸರಿಯಾಗಿ ಅರ್ಥೈಸಿ ಜೀತದಾಳು ಎಂದು ಗುರುತಿಸಬೇಕಾಗುತ್ತದೆ. ಜೀತದಾಳು ಎಂದು ಮೇಲ್ನೋಟಕ್ಕೆ ಕಂಡು ಬಂದ ಮೇಲೆ ಅದನ್ನು ಖಾತರಿ ಪಡಿಸಿಕೊಳ್ಳಲು ಹೆಚ್ಚುವರಿ ಪ್ರಶ್ನೆಗಳು ಅಂದರೆ ಜೀತದಾಳುವಿಗೆ ಬೇರೆ ಮಾಲೀಕರು ಅಥವಾ ಬೇರೆ ಊರಲ್ಲಿ ಹೆಚ್ಚಿನ ಕೂಲಿ ಕೆಲಸ ಅಥವಾ ಸರ್ಕಾರಿ ಕಛೇರಿಯೊಂದರಲ್ಲಿ ಒಳ್ಳೆಯ ಸಂಬಳದ ಪೇದೆ ಕೆಲಸ ಲಭ್ಯವಿದ್ದು ಅಲ್ಲಿಗೆ ಅವರು

***ಜೀತ ಪದ್ಧತಿ ಮಾನವತೆಗೊಂದು ಕಳಂಕ***
***ತೊಡೆದು ಹಾಕೋಣ ಈ ಅನಿಷ್ಟ ಪದ್ಧತಿ***

ಹೋಗಲು ತಯಾರಿದ್ದಾರೆಯೇ ಎಂದು ಕೇಳಬೇಕು. ನಿಜವಾದ ಜೀತದಾಳುವು ನನಗೆ ಬರಲಿಕ್ಕಾಗುವುದಿಲ್ಲ; ನನ್ನ ಯಜಮಾನ ಬಿಡುವುದಿಲ್ಲ; ಸಾಲ ತೀರಿದ ಮೇಲೆ ಬೇಕಾದರೆ ಬರಬಹುದು ಎಂದು ಹೇಳಿ ನಿರಾಕರಿಸುತ್ತಾನೆ. ಈ ರೀತಿಯ ಉತ್ತರಗಳು ಒಬ್ಬ ಜೀತದಾಳುವಿನಿಂದ ಬಂದರೆ ಅವರು ಜೀತದಾಳು ಎಂದು ಖಚಿತವಾಗುತ್ತದೆ.

**ಪ್ರಶ್ನೆ: ಜೀತಪದ್ಧತಿ (ರದ್ದತಿ) ಕಾಯ್ದೆ 1976ರಡಿ ವಿಚಾರಣೆ ಮಾಡುವ ಅಧಿಕಾರ ಯಾರಿಗಿದೆ?**

**ಉತ್ತರ:** ಈ ಕಾಯಿದೆಯಡಿ ಎಸಗುವ ಅಪರಾಧಗಳ ವಿಚಾರಣೆಯನ್ನು ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ. ಇವರಿಗೆ ಮೊದಲನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರವನ್ನು ರಾಜ್ಯ ಸರ್ಕಾರ ನೀಡಿದೆ. ಇವರು ಕ್ಷಿಪ್ರ ವಿಚಾರಣೆ ನಡೆಸಿ, ಸೂಕ್ತ ದಂಡ ಅಥವಾ ಶಿಕ್ಷೆ ವಿಧಿಸಬಹುದು. ಈ ಕಾಯ್ದೆಯು ಯಾವುದೇ ವಿಷಯದಲ್ಲಿ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ರಾಜ್ಯ ಸರ್ಕಾರವು ಉಪ ವಿಭಾಗಾಧಿಕಾರಿಗಳಿಗೆ ಕೂಡ ಎರಡನೇ ವರ್ಗದ ನ್ಯಾಯಿಕ ದಂಡಾಧಿಕಾರಿಗಳ ಅಧಿಕಾರವನ್ನು ನೀಡಿದೆ.

**ಪ್ರಶ್ನೆ: ಜೀತ ಪದ್ಧತಿ ನಿರ್ಮೂಲನೆ ಮಾಡುವಲ್ಲಿ ಗ್ರಾಮ ಪಂಚಾಯಿತಿ ಪಾತ್ರವೇನು?**

**ಉತ್ತರ:** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 58(ಎ) ಪ್ರಕಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾವುದೇ ಜೀತ ಪದ್ಧತಿ ಪ್ರಕರಣವನ್ನು ಜಿಲ್ಲಾಧಿಕಾರಿಯವರಿಗೆ ಅಥವಾ ಸರ್ಕಾರ ನಿಗದಿಪಡಿಸಿದ ಅಧಿಕಾರಿಯವರಿಗೆ ವರದಿ ಮಾಡಬೇಕು. ಜೀತ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಂದು ಕಂಡುಬಂದಲ್ಲಿ ಗ್ರಾಮ ಪಂಚಾಯಿತಿಯನ್ನು ವಿಸರ್ಜನೆ ಮಾಡುವ ಲೋಪವೆಂದು ಪರಿಗಣಿಸಲಾಗುತ್ತದೆ. ಅಲ್ಲದೆ ಜೀತ ಪ್ರಕರಣಗಳಿರುವ ಅಥವಾ ಇಲ್ಲದಿರುವ ಬಗ್ಗೆ ಪ್ರತಿ ತ್ರೈಮಾಸಿಕ ಸಭೆಯಲ್ಲಿ ಠರಾವು ಮಾಡಬೇಕಾಗಿರುತ್ತದೆ.

*ಮಹಿಳೆಯರ ಆರ್ಥಿಕ ಮಟ್ಟ ಸುಧಾರಿಸಿ*
*ಜೀತ ನಿರ್ಮೂಲನೆಗೆ ಸಹಕರಿಸಿ*



**ಪ್ರಶ್ನೆ: ಜೀತದಾಳುಗಳ ಬಿಡುಗಡೆ ಮತ್ತು ಪುನರ್ವಸತಿ ಎಂದರೇನು?**

**ಉತ್ತರ:** ಜೀತದಾಳುಗಳ ಬಿಡುಗಡೆ ಎಂದರೆ, ಸಮೀಕ್ಷೆ ಅಥವಾ ತನಿಖೆಯಿಂದ ಜೀತದಾಳು ಎಂದು ಗುರುತಿಸಲ್ಪಟ್ಟವರನ್ನು ಕಾಯ್ದೆಯಡಿ ನೇಮಿಸಲಾದ ಅಧಿಕಾರಿಯವರು ತಮ್ಮ ಆದೇಶದ ಮೂಲಕ ಜೀತದಿಂದ ವಿಮುಕ್ತಿಗೊಳಿಸುವುದು. ಸಾಮಾನ್ಯವಾಗಿ, ಈ ಪ್ರಕ್ರಿಯೆಯು ಜೀತದಾಳು ಎಂದು ಗುರುತಿಸಲ್ಪಟ್ಟ 15 ದಿನಗಳೊಳಗಾಗಿ ಪೂರ್ಣಗೊಂಡು ಬಿಡುಗಡೆ ಆದೇಶ ಸಂಬಂಧಿಸಿದವರಿಗೆ ಲಭ್ಯವಾಗುತ್ತದೆ. ವಿಮೋಚಿತ ಜೀತದಾಳು ಮುಂದೆ ಯಾವುದೇ ಜೀತ ಸಾಲ ಮಾಡದಂತೆ ಅವನ ಆರ್ಥಿಕ ಹಿತಾಸಕ್ತಿಗಳನ್ನು ಭದ್ರಪಡಿಸಿ ಸಂರಕ್ಷಿಸುವುದು ಬಹು ಮುಖ್ಯವಾದ ವಿಚಾರ. ಜೀತದಿಂದ ಬಿಡುಗಡೆ ಹೊಂದಿದ ಕೂಡಲೇ ಜೀತ ವಿಮುಕ್ತರು ಕೇಂದ್ರ ಪುರಸ್ಕೃತ ಯೋಜನೆ ಮತ್ತು ರಾಜ್ಯ ಸರ್ಕಾರದ ಯೋಜನೆಗಳಡಿ ಲಭ್ಯವಿರುವ ಸವಲತ್ತುಗಳಿಗೆ ಅರ್ಹರಾಗುತ್ತಾರೆ. ಜೀತ ವಿಮುಕ್ತರ ಪುನರ್ವಸತಿಗಾಗಿ ಬಡತನ ನಿರ್ಮೂಲನೆ ಕಾರ್ಯಕ್ರಮಗಳು, ಭೂ ಆಧಾರಿತ ಕಾರ್ಯಕ್ರಮಗಳು, ಆದಾಯ ಉತ್ಪನ್ನ ಚಟುವಟಿಕೆಗಳು, ಕರಕುಶಲ ಆಧಾರಿತ ಹಾಗೂ ಇತರೆ ಕಾರ್ಯಕ್ರಮಗಳಡಿ ಸವಲತ್ತುಗಳನ್ನು ಆದ್ಯತೆ ಮೇರೆಗೆ ನೀಡಿ ಆತನ ಕಲ್ಯಾಣಕ್ಕಾಗಿ ಭದ್ರ ಬುನಾದಿ ಹಾಕಿ ಪ್ರಗತಿ ಬಗ್ಗೆ ಆಗಿಂದಾಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗುತ್ತದೆ.

**ಪ್ರಶ್ನೆ: ಜೀತ ಪದ್ಧತಿ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಅನಿಸಿಕೆಗಳೇನು?**

**ಉತ್ತರ:** ಸಾಮಾಜಿಕ ಅನಿಷ್ಟಗಳಲ್ಲಿ ಜೀತ ಪದ್ಧತಿಯು ಅತ್ಯಂತ ಹೇಯ ಪದ್ಧತಿಯಾಗಿದ್ದು, ಇದರ ನಿರ್ಮೂಲನೆಗಾಗಿ ಕಾಯ್ದೆಯು 1975ರಿಂದ ಇದ್ದರೂ ಕೂಡ ಒಂದಲ್ಲ ಒಂದು ರೂಪದಲ್ಲಿ ಇದರ ಮುಂದುವರಿಕೆ ಅತ್ಯಂತ ಶೋಚನೀಯ ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ. ಆದುದರಿಂದ ಜೀತ ಪ್ರಕರಣಗಳ ಬಗ್ಗೆ ಮರು ಸಮೀಕ್ಷೆ ಕೈಗೊಂಡು ಆದ್ಯತೆ ಮೇರೆಗೆ ಇದನ್ನು ಸಂಪೂರ್ಣ ನಿರ್ಮೂಲನೆ ಮಾಡಲು ನ್ಯಾಯಾಲಯವು ಆದೇಶಿಸಿದೆ.

*ಪರರ ಹಂಗಿನ ಬದುಕು, ಕಾಣದು ಎಂದೂ ಬೆಳಕು.......*

# ಜೀತ ಪದ್ಧತಿ ಜಾಗೃತಿ ಸಮಿತಿಯ ರಚನೆ ಮತ್ತು ಜವಾಬ್ದಾರಿಗಳು

**ಕಿರಣ ಕಮಲ ಪ್ರಸಾದ,** ಸಂಚಾಲಕರು 'ಜೀವಿಕ' ಹಾಗೂ ಸದಸ್ಯರು, ಎನ್.ಹೆಚ್.ಆರ್.ಸಿ., ನವದೆಹಲಿ
**ಉಮೇಶ ಬಿ** 'ಜೀವಿಕ' ರಾಜ್ಯ ಕಲಾ ಸಂಚಾಲಕರು

**ಜೀತ ಪದ್ಧತಿ ಜಾಗೃತಿ ಸಮಿತಿಗಳು ಯಾವ ಮಟ್ಟದಲ್ಲಿ ರಚನೆಯಾಗುತ್ತವೆ?**

**ಉತ್ತರ:** (1) ಜಿಲ್ಲಾ ಮಟ್ಟದಲ್ಲಿ (2) ಉಪ ವಿಭಾಗ ಮಟ್ಟದಲ್ಲಿ ಜೊತೆಗೆ ಕರ್ನಾಟಕ ಜೀತದಾಳುಗಳ ಕ್ರಿಯಾಯೋಜನೆ 2008ರ ಪ್ರಕಾರ (3) ತಾಲ್ಲೂಕು (4) ಗ್ರಾಮ ಪಂಚಾಯತಿ ಮಟ್ಟದಲ್ಲೂ ಕಾರ್ಯಪಡೆ ಅಥವಾ ಜಾಗೃತಿ ಸಮಿತಿಗಳನ್ನು ರಚಿಸಬೇಕಾಗಿದೆ.

**ಇವುಗಳಿಗೆ ಅಧ್ಯಕ್ಷರು ಯಾರು?**

**ಉತ್ತರ:** ಜಿಲ್ಲಾಧಿಕಾರಿಗಳು – ಜಿಲ್ಲಾಮಟ್ಟದಲ್ಲಿ; ಉಪ ವಿಭಾಗಾಧಿಕಾರಿಗಳು – ಉಪ ವಿಭಾಗ ಮಟ್ಟದಲ್ಲಿ

**ಇವುಗಳ ಸದಸ್ಯರು ಯಾರು?**

**ಉತ್ತರ:** ಎರಡೂ ಮಟ್ಟದ ಸಮಿತಿಗಳಿಗೆ ಸುಮಾರು ಒಂದೇ ತರಹದ ಸದಸ್ಯರಿರುತ್ತಾರೆ:

- 3 ಮಂದಿ ಅನುಸೂಚಿತ ಜಾತಿ ಮತ್ತು ಜನಾಂಗದವರು–**ಇವರಲ್ಲಿ ಒಬ್ಬರು ಮಹಿಳೆಯಾಗಿರಬೇಕು.**
- 2 ಮಂದಿ ಸಮಾಜ ಸೇವಕರು–**ಇವರಲ್ಲಿ ಒಬ್ಬರು ಮಹಿಳೆಯಾಗಿರಬೇಕು.**
- 3 ಮಂದಿ ಗ್ರಾಮೀಣಾಭಿವೃದ್ಧಿ ಕುರಿತ ಸರ್ಕಾರಿ ಅಥವಾ ಸರ್ಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು – **ಇವರಲ್ಲಿ ಒಬ್ಬರು ಮಹಿಳೆಯಾಗಿರಬೇಕು.**
- 1 ಆರ್ಥಿಕ ಲೇವಾದೇವಿ ಸಂಸ್ಥೆಯ ಪ್ರತಿನಿಧಿ



- ಜೊತೆಗೆ ಉಪವಿಭಾಗದ ಸಮಿತಿಗೆ ಅನುಚ್ಛೇದ 10ರಲ್ಲಿ ನೇಮಕಗೊಂಡ ಅಧಿಕಾರಿ

ಇವರೆಲ್ಲರ ಜೊತೆಗೆ ಕರ್ನಾಟಕ ಸರ್ಕಾರದ ಸುತ್ತೋಲೆಯ ಪ್ರಕಾರ ಈ ಕೆಳಗಿನ ಅಧಿಕಾರಿಗಳನ್ನೂ ನೇಮಕ ಮಾಡಲಾಗಿದೆ.

- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ವರಿಷ್ಠ ಪೊಲೀಸ್ ಅಧಿಕಾರಿ, ಜಿಲ್ಲಾ ಕಾರ್ಮಿಕ ಅಧಿಕಾರಿ, ಜಿಲ್ಲಾ ರೇಷ್ಮೆ ಅಧಿಕಾರಿ, ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿಗಳು.
- ಉಪವಿಭಾಗ ಮಟ್ಟದಲ್ಲಿ ಉಪ ವಿಭಾಗ ಕೇಂದ್ರದಲ್ಲಿರುವ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ, ಉಪ ಆರಕ್ಷಕ ಅಧೀಕ್ಷಕರು, ಉಪ ವಿಭಾಗದ ಕಾರ್ಮಿಕ ಅಧಿಕಾರಿ, ಉಪವಿಭಾಗದ ರೇಷ್ಮೆ ಅಧಿಕಾರಿ, ಉಪವಿಭಾಗದ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ ಹಾಗೂ ಉಪ ವಿಭಾಗ ಕೇಂದ್ರದಲ್ಲಿರುವ ತಾಲ್ಲೂಕಿನ ತಹಶೀಲ್ದಾರರು.

**ನೇಮಕ ಪ್ರಕ್ರಿಯೆ:** ಸೂಕ್ತ ವ್ಯಕ್ತಿಗಳನ್ನೇ ಜಾಗೃತಿ ಸಮಿತಿಗಳಲ್ಲಿ ನೇಮಿಸಬೇಕು. ಅಂದರೆ ಸರ್ಕಾರೇತರ ವ್ಯಕ್ತಿಗಳು ಜೀತ ಪದ್ಧತಿ ಬಗ್ಗೆ ಕಾಳಜಿ ಉಳ್ಳವರಾಗಿರಬೇಕು ಅಥವಾ ಜೀತ ಸಮಸ್ಯೆ ಬಗ್ಗೆ ದುಡಿದವರು ಅಥವಾ ದುಡಿಯುತ್ತಿರುವವರಾಗಿರಬೇಕು.

**ಸಮಿತಿಯ ಅವಧಿ ಮತ್ತು ಸಭೆಗಳು**

ಮೂರು ವರ್ಷಕ್ಕೆ ಒಂದು ಸಾರಿ ನೇಮಕವಾಗಬೇಕು. ಮೂರು ವರ್ಷದ ನಂತರ ಹೊಸ ಸಮಿತಿಯ ರಚನೆಗೆ ವಿಳಂಬವಾದರೆ ಹಳೆ ಸಮಿತಿಯ ಸದಸ್ಯರೇ ಮುಂದುವರಿಯುತ್ತಾರೆ. ಅಂದರೆ ಯಾವುದೇ ಕಾರಣಕ್ಕೂ ಜೀತ ಜಾಗೃತಿ ಸಮಿತಿಯು ಅಸ್ತಿತ್ವದಲ್ಲಿಲ್ಲ ಎಂದು ತಿಳಿದುಕೊಳ್ಳಲಾಗದು.

ಜೀತ ಜಾಗೃತಿ ಸಮಿತಿಯು ಎರಡು ತಿಂಗಳುಗಳಿಗೆ ಒಂದು ಸಾರಿ ಸಭೆ ಸೇರಬೇಕು.

**ಜವಾಬ್ದಾರಿಗಳು**

1. ಜಿಲ್ಲಾಧಿಕಾರಿಗಳು / ಉಪ ವಿಭಾಗಾಧಿಕಾರಿಗಳಿಗೆ ಸಲಹೆ ಸೂಚನೆ ನೀಡುವುದು–ಜೀತ ಕಾನೂನಿನಡಿ ಕೈಗೊಂಡ ಪ್ರಯತ್ನ/ಕ್ರಮಗಳ ಬಗ್ಗೆ.
2. ವಿಮೋಚಿತ ಜೀತದಾಳುಗಳಿಗೆ ಆರ್ಥಿಕ, ಸಾಮಾಜಿಕ ಪುನರ್ವಸತಿ ಸೌಲಭ್ಯಗಳನ್ನು ನೀಡುವುದು.
3. ವಿಮೋಚಿತ ಜೀತದಾಳುಗಳಿಗೆ ಸಾಲ ಸೌಲಭ್ಯ ಒದಗಿಸುವುದು– ಗ್ರಾಮೀಣ ಬ್ಯಾಂಕ್ ಮತ್ತು ಸಹಕಾರಿ ಸಂಘಗಳ ಜೊತೆಗೂಡಿ.
4. ಜೀತ ಕಾನೂನಿನಡಿ ನಡೆಯುವ ಅಪರಾಧಗಳ ಸಮೀಕ್ಷೆ ಕೈಗೊಳ್ಳುವುದು
5. ಜೀತದಾಳುಗಳ ಪರವಾಗಿ ಕೋರ್ಟುಗಳಲ್ಲಿ ವಕಾಲತ್ತು ವಹಿಸುವುದು– ಮಾಲೀಕರು ಜೀತ ಸಾಲ ಪಡೆಯಲು ಹೂಡಿದ ದಾವೆಗಳಲ್ಲಿ.

**ಕರ್ನಾಟಕ ಪಂಚಾಯತ್ ರಾಜ್ ಕಾನೂನು 1993ರ ಪರಿಚ್ಛೇದ 58ಎ** ಪ್ರಕಾರ ಪ್ರತಿ ಗ್ರಾಮ ಪಂಚಾಯತಿಗಳು ಜಿಲ್ಲಾಧಿಕಾರಿಗಳಿಗೆ ಜೀತ ಕುರಿತು ವರದಿ ನೀಡಬೇಕು. ಸರ್ಕಾರದ ಸುತ್ತೋಲೆ ಪ್ರಕಾರ ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರಿಗೂ ಕೊಡಬೇಕು.

**ಜೀತದಾಳುಗಳನ್ನು ಗುರುತಿಸಲು ಸಹಾಯಕ ವ್ಯವಸ್ಥೆಗಳು**

ಜಿಲ್ಲೆ ಮತ್ತು ಉಪವಿಭಾಗ ಮಟ್ಟದ ಜಾಗೃತ ಸಮಿತಿಗಳಿಗೆ ಇಡೀ ಜಿಲ್ಲೆ ಮತ್ತು ಉಪ ವಿಭಾಗಗಳಲ್ಲೆಲ್ಲಾ ಸಮೀಕ್ಷೆ ಮಾಡಲು ಕಷ್ಟಕರ. ಅದಕ್ಕೆಂದೇ ಕರ್ನಾಟಕ ಸರ್ಕಾರ ಈ ವ್ಯವಸ್ಥೆಗಳನ್ನೂ ರೂಪಿಸಿದೆ:



- ತಾಲ್ಲೂಕು ಮಟ್ಟದಲ್ಲಿ ಜೀತ ಕುರಿತ ಒಂದು ಕಾರ್ಯ ಪಡೆ ಅಥವಾ ಜಾಗೃತ ಸಮಿತಿ
- ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಒಂದು ಕಾರ್ಯ ಪಡೆ ಅಥವಾ ಜಾಗೃತ ಸಮಿತಿ

**ಜೀತದಾಳುಗಳನ್ನು ಗುರುತಿಸುವ ವಿಧಾನ:** ಎಸ್.ಆರ್. ಶಂಕರನ್‌ರವರ ಮಾರ್ಗದರ್ಶನಗಳ ಪ್ರಕಾರ ಮತ್ತು ಕರ್ನಾಟಕ ಸರ್ಕಾರವು ಮೇ 28, 2012ರಲ್ಲಿ ಕಳುಹಿಸಿದ ಸುತ್ತೋಲೆಯಲ್ಲಿ ನಿಗದಿಪಡಿಸಿದ 9 ಅನುಬಂಧಗಳಲ್ಲಿಯ ಪ್ರಶ್ನಾವಳಿಗಳನ್ನು ಬಳಸಿ.

ಜೀತದಾಳುಗಳನ್ನು ಗುರುತಿಸಲು ಮೊದಲು ಜೀತ ಕಲ್ಪನೆ ಬಗ್ಗೆ ಕಾನೂನಾತ್ಮಕ ಪರಿಜ್ಞಾನ ಇರಬೇಕು. ಅದಕ್ಕೋಸ್ಕರ **ಜೀತ ಕಾನೂನಿನ ಬಗ್ಗೆ ಮತ್ತು ಜೀತದಾಳುಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸುವ ಬಗ್ಗೆ ಸಂವೇದನಾ ತರಬೇತಿ**ಗಳನ್ನು ಆಯೋಜಿಸಬೇಕು.

ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಜೀತ ಜಾಗೃತಿ ಸಮಿತಿಯ ಸದಸ್ಯರಿಗೆ ಮತ್ತು ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳಿಗೆ ನಡೆಸಿಕೊಂಡು ಹೋಗಬೇಕು.

ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಜೀತ ಜಾಗೃತಿ ಸಮಿತಿ ಮತ್ತು ಎಲ್ಲಾ ಗ್ರಾಮ ಪಂಚಾಯತಿ ಜೀತ ಜಾಗೃತಿ ಸಮಿತಿಯ ಸದಸ್ಯರಿಗೆ ನಡೆಸಬೇಕು – ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿಗಳು, ಎಲ್ಲಾ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು, ಗ್ರಾಮ ಪಂಚಾಯತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಜೀತ ಕುರಿತು ಕೆಲಸ ಮಾಡುತ್ತಿರುವ ಸಂಘಟನೆಗಳ ಪ್ರತಿನಿಧಿಗಳು.

**ಜೀತದಾಳುಗಳನ್ನು ಗುರುತಿಸುವ ವಿಧಾನ–ಎಸ್.ಆರ್. ಶಂಕರನ್‌ರವರ ಮಾರ್ಗದರ್ಶನಗಳು**

1. ಜೀತ ತನಿಖಾ ತಂಡವು ನೇರವಾಗಿ ದಲಿತ ಅಥವಾ ಮೂಲ ನಿವಾಸಿ ಕೇರಿಗೆ ಹೋಗಿ ತನಿಖೆ ನಡೆಸಬೇಕು–ಜೀತಕ್ಕಿರುವ ಮಾಲೀಕರ ಮನೆಯಲ್ಲಿ ಅಲ್ಲ.

2. ಯಾವುದೇ ಕಾರಣಕ್ಕೂ ಜೀತದಾಳುವನ್ನು ಅವನ ಮಾಲೀಕನ ಎದುರು ತನಿಖೆ ಮಾಡಬಾರದು.
3. ಜೀತ ತನಿಖೆಯನ್ನು ಒಂದು ಗುಂಪಲ್ಲಿ ನಡೆಸಿಕೊಂಡು ಹೋಗಬೇಕು.
4. ಜೀತದಾಳುಗಳಿಗೆ ನೇರವಾಗಿ ನೀವು ಜೀತದಾಳೊ? ಎಂದು ಕೇಳುವ ಬದಲು ಮೊದಲು ಅವರ ವಿಶ್ವಾಸ ಸಂಪಾದಿಸಬೇಕು. ನಂತರ ಕೇರಿಯ ಜನರು ಮಾಡುವ ಬೇರೆ ಬೇರೆ ಕೆಲಸಗಳನ್ನು ವಿಚಾರಿಸಿ ಕೊನೆಗೆ ಒಂದೇ ಕಡೆ ಕೆಲಸ ಮಾಡುವ ಕಾರ್ಮಿಕರನ್ನು ಗುರುತಿಸಿ ಅವರು ಕಾನೂನು ಪ್ರಕಾರ ಜೀತದಾಳು ಎಂದು ತಿಳಿಯಲು ವಿವರವಾದ ಪ್ರಶ್ನೆಗಳನ್ನು ಕೇಳಬೇಕು. [ಈ ಪ್ರಶೆಗಳನ್ನು ಈಗ ಸರ್ಕಾರವು 8 ಪ್ರಶ್ನಾವಳಿಗಳ ಅನುಬಂಧಗಳ ರೂಪದಲ್ಲಿ ಕೊಟ್ಟಿದೆ.]
5. ಒಬ್ಬನು ಜೀತದಾಳು ಎಂದು ಸ್ಪಷ್ಟವಾದ ಮೇಲೆ ಅವನು ಜೀತದಾಳುವೆಂದು ದೃಢಪಡಿಸಲು ಕೆಲವು ಸೂಕ್ತ ಪ್ರಶ್ನೆಗಳನ್ನು ಕೇಳಬೇಕು. ಅವ್ಯಾವುವೆಂದರೆ: ಜೀತದಾಳುವಿಗೆ ಬೇರೆ ಮಾಲೀಕರು ಹೆಚ್ಚಿನ ಕೂಲಿ ಕೊಡುತ್ತಿದ್ದಾರೆಂದೋ ಅಥವಾ ಬೇರೆ ಊರಲ್ಲಿ ಹೆಚ್ಚಿನ ಕೂಲಿಗೆ ಕೆಲಸ ಸಿಗುತ್ತದೆಂತಲೋ ಅಥವಾ ಸರ್ಕಾರಿ ಕಛೇರಿಯೊಂದರಲ್ಲಿ ಒಳ್ಳೆಯ ಸಂಬಳದ ಪೇದೆ ಕೆಲಸ ಸಿಗುತ್ತದೆಂತಲೋ ಹೇಳಿ ಅಲ್ಲಿ ಅವರು ಕೆಲಸಕ್ಕೆ ಹೋಗಲು ತಯಾರಿದ್ದಾರೆಯೇ ಎಂದು ಕೇಳುವುದು. ನಿಜವಾದ ಜೀತದಾಳುವು ನನಗೆ ಬರಲಿಕ್ಕಾಗುವುದಿಲ್ಲ; ನನ್ನ ಯಜಮಾನ ಬಿಡುವುದಿಲ್ಲ; ಸಾಲ ತೀರಿದ ಮೇಲೆ ಬೇಕಾದರೆ ಬರಬಹುದು; ಇತ್ಯಾದಿ. ಹೀಗೆ ಈ ರೀತಿಯ ಉತ್ತರಗಳು ಒಬ್ಬ ಜೀತದಾಳುವಿನಿಂದ ಬಂದರೆ ಅವರು ಜೀತದಾಳು ಎಂದೇ ಸ್ಪಷ್ಟವಾಗುತ್ತದೆ.

***ಪ್ರತಿಭಟಿಸಿ ಜೀತವನ್ನು, ಕಂಡಲ್ಲಿ-ಕೇಳಿದಲ್ಲಿ***



**ಮೇ 28, 2012ರ ಸರ್ಕಾರದ ಸುತ್ತೋಲೆಯಲ್ಲಿನ 9 ಅನುಬಂಧಗಳಲ್ಲಿಯ ಪ್ರಶ್ನಾವಳಿಗಳು**

9 ಅನುಬಂಧಗಳಲ್ಲಿಯ ಪ್ರಶ್ನಾವಳಿಗಳು ತೀರ ವಿವರವಾಗಿ ಕ್ಲಿಷ್ಟವಾಗಿವೆ ಎಂದು ಮೇಲ್ನೋಟಕ್ಕೆ ಅನಿಸಿದರೂ ಸಹ ಅವು ಸರಳವಾಗಿವೆ ಮತ್ತು ನಿಜವಾದ ಜೀತದಾಳುಗಳನ್ನು ಕಂಡು ಹಿಡಿಯಲು ಸಹಕಾರಿಯಾಗಿವೆ.

ಮೊದಲ ಎರಡು ಅನುಬಂಧಗಳಲ್ಲಿ ಊರಿನ ಒಟ್ಟಾರೆ ವಿಚಾರಗಳು ಮತ್ತು ತೀರ ಬಡವರ ಗುಂಪುಗಳನ್ನು ಗುರುತಿಸಿ, ತೀರ ಬಡವರಲ್ಲಿ ಬೇರೆ ಬೇರೆ ರೀತಿಯ ಕೆಲಸಗಳ ವಿವರ ಪಡೆದು ಅವರಲ್ಲಿ ದಿನಗೂಲಿ ಕೆಲಸ ಮಾಡುವವರು ಮತ್ತು ಒಂದೇ ಕಡೆ ಕೆಲಸ ಮಾಡುವವರನ್ನು ಕಂಡು ಹಿಡಿಯಲಾಗುತ್ತದೆ. ಒಂದೇ ಕಡೆ ಕೆಲಸ ಮಾಡುವವರಲ್ಲಿ 6 ತಿಂಗಳುಗಳಿಗಿಂತ ಕಡಿಮೆ ಕೆಲಸ ಮಾಡುವವರು, 6 ತಿಂಗಳಿಂದ ಒಂದು ವರ್ಷದವರೆಗೆ ಕೆಲಸ ಮಾಡುವವರು ಮತ್ತು ಒಂದು ವರ್ಷಕ್ಕಿಂತ ಮೇಲ್ಪಟ್ಟು ಕೆಲಸ ಮಾಡುವವರನ್ನು ಗುರುತಿಸಲಾಗುವುದು. ಅನುಬಂಧ 3ರಲ್ಲಿ 6 ತಿಂಗಳಿಂದ ಒಂದು ವರ್ಷದ ತನಕ ಕೆಲಸ ಮಾಡುವವರಲ್ಲಿ ಬೇರೆ ಕಡೆ ಕೆಲಸಕ್ಕೆ ಹೋಗುವ ಸ್ವಾತಂತ್ರ್ಯ ಇಲ್ಲವೆಂದು ತಿಳಿದು ಅನುಬಂಧ 4ರಲ್ಲಿ ಅವರು ಮತ್ತು ಅನುಬಂಧ 2ರಲ್ಲಿ ಕೂಲಿ ಇಲ್ಲದೇ ಕೆಲಸ ಮಾಡುವವರು ಜೀತದಾಳುಗಳೋ ಎಂದು ತಿಳಿಯಲು ವಿವರವಾಗಿ ಪ್ರಶ್ನೆಗಳನ್ನು ಕೇಳಬೇಕು. ಆ ಪ್ರಶ್ನೆಗಳಿಗೆ ಬಂದ ಉತ್ತರಗಳಿಂದ ಒಬ್ಬ ವ್ಯಕ್ತಿಯು ಜೀತದಾಳುವೋ ಅಲ್ಲವೋ ಎಂದು ತೀರ್ಮಾನಕ್ಕೆ ಬರಬಹುದು. ಅವರು ಜೀತದಾಳುಗಳು ಎಂದು ಗೊತ್ತಾದರೆ ಅವರಿಂದ ಅನುಬಂಧ 4ರ ಕೊನೆಗೆ ಸಹಿ ಪಡೆಯಬೇಕು. ಅನುಬಂಧ 5ರಲ್ಲಿ ಅವರ ಭಾವಚಿತ್ರಗಳನ್ನು ಅಂಟಿಸಬೇಕು. ಅನುಬಂಧ 6, 7 ಮತ್ತು 8 ರಲ್ಲಿ ಸಮೀಕ್ಷಾ ತಂಡವು ತಾವು ಗುರುತಿಸಿದ ಜೀತದಾಳುಗಳ ಬಗ್ಗೆ ತಹಶೀಲ್ದಾರರಿಗೆ ವರದಿ ನೀಡಬೇಕು. ಅನುಬಂಧ 9ರಲ್ಲಿ ಜಿಲ್ಲಾಧಿಕಾರಿಗಳು ಗುರುತಿಸಿದ ಜೀತದಾಳುಗಳ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಬೇಕು.

ಗುರುತಿಸಿದ ಜೀತದಾಳುಗಳಿಗೆ 15 ದಿನಗಳೊಳಗಾಗಿ ಬಿಡುಗಡೆ ಪತ್ರಗಳನ್ನು ನೀಡಬೇಕು ಮತ್ತು ಮೂರು ತಿಂಗಳುಗಳೊಳಗೆ ಪುನವರ್ಸತಿ ಸೌಲಭ್ಯಗಳನ್ನು ಒದಗಿಸಬೇಕು.

**ಪುನರ್ವಸತಿ**

ಜೀತ ಪದ್ಧತಿ ಕಾನೂನಿನಲ್ಲಿ ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿ ಹಾಗೂ ಅಪರಾಧಿಗಳ ವಿಚಾರಣೆ ಮತ್ತು ದಂಡನೆಯನ್ನು ಜಿಲ್ಲಾಧಿಕಾರಿಗಳೇ ಮಾಡಬೇಕು.

ಅಪರಾಧಿಗಳ ವಿಚಾರಣೆ ಮತ್ತು ದಂಡನೆಗೆ ಜಿಲ್ಲಾಧಿಕಾರಿಗಳಿಗೆ ನ್ಯಾಯಿಕ ದಂಡಾಧಿಕಾರಿಗಳ ಪ್ರಥಮ ದರ್ಜೆಯ ಅಧಿಕಾರಗಳನ್ನು ರಾಜ್ಯ ಸರ್ಕಾರವು 1976ರಲ್ಲೇ ನೀಡಿದೆ. ನ್ಯಾಯಿಕ ದಂಡಾಧಿಕಾರಿಗಳ ದ್ವಿತೀಯ ದರ್ಜೆಯ ಅಧಿಕಾರಗಳನ್ನು ರಾಜ್ಯ ಸರ್ಕಾರವು 2010ರಲ್ಲಿ ಉಪ ವಿಭಾಗಾಧಿಕಾರಿಗಳಿಗೆ ನೀಡಿದೆ. ಅಪರಾಧಿಗಳ ವಿಚಾರಣೆಯನ್ನು ಕ್ಷಿಪ್ರಗತಿಯಲ್ಲಿ ನಡೆಸಬೇಕು.

ಕರ್ನಾಟಕ ರಾಜ್ಯದಲ್ಲಿ ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಮತ್ತು ಪುನರ್ವಸತಿಗಳಿಗೆ ಈ ಮುಂದಿನ ವ್ಯವಸ್ಥೆಗಳನ್ನು ಮಾಡಿಕೊಂಡಿದೆ. ಮೊದಲ ಎರಡು ಜವಾಬ್ದಾರಿಗಳನ್ನು ಜಿಲ್ಲಾಧಿಕಾರಿಗಳೇ ನಡೆಸಿಕೊಂಡು ಹೋದರೆ, ಜೀತದಾಳುಗಳ ಪುನರ್ವಸತಿಯ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ನಡೆಸಿಕೊಂಡು ಹೋಗುತ್ತಾರೆ.

ಕೇಂದ್ರ ಪುರಸ್ಕೃತ ಯೋಜನೆ 2000ರ ಪ್ರಕಾರ ಜೀತದಾಳುಗಳ ಪುನರ್ವಸತಿಗೆ ಪ್ರತಿ ಜೀತದಾಳುಗಳಿಗೆ 20,000 ರೂಪಾಯಿಗಳ ಅನುದಾನ ನೀಡಬೇಕು. ಅದನ್ನು ಭೂಮಿ ಆಧಾರಿತ, ಭೂಮಿ ಆಧಾರಿತವಲ್ಲದ ಮತ್ತು ಕೌಶಲ್ಯ ಅಥವಾ ಕರಕುಶಲ ಆಧಾರಿತ ವೃತ್ತಿಗಳಿಗೋಸ್ಕರ ಬಳಸಬಹುದು.



ರೂ.20,000ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಭಾಗದಲ್ಲಿ ಮಂಜೂರು ಮಾಡಬೇಕು.

ಇದರ ಜೊತೆಗೆ ಕರ್ನಾಟಕ ಸರ್ಕಾರದ ವಿಶಿಷ್ಟ ಯೋಜನೆಯೊಂದರ ಪ್ರಕಾರ ಪ್ರತಿ ವಿಮುಕ್ತ ಜೀತದಾಳಿಗೆ ತಿಂಗಳಿಗೆ ರೂ.300ನಂತೆ 24 ತಿಂಗಳುಗಳ ತನಕ ಮಾಸಾಶನ ಸಿಗಬೇಕು. ಇದನ್ನು ಒಂದೇ ಗಂಟಲ್ಲಿ ಕೊಟ್ಟರೆ ಜೀತದಾಳುವು ತನ್ನ ಪುನರ್ವಸತಿಗೆ ಉತ್ತಮ ಸೌಲಭ್ಯ ಕಲ್ಪಿಸಲು ಸಾಧ್ಯವಾಗಬಹುದು.

ರೂ.20,000ಗಳಲ್ಲಿ ಒಬ್ಬ ಜೀತದಾಳುವನ್ನು ಬಿಡುಗಡೆಗೊಳಿಸಿದ ತಕ್ಷಣ ಅವರಿಗೆ ರೂ.1,000ಗಳನ್ನು ನೀಡಬೇಕು. ಉಳಿದ ಹಣವನ್ನು ಬಿಡುಗಡೆಗೊಳಿಸಿದ ಎರಡು ತಿಂಗಳುಗಳೊಳಗೆ ಮಂಜೂರು ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಣ ಬಿಡುಗಡೆ ಮಾಡುವ ತನಕ ಕಾಯದೆ ಬೇರೆ ಯೋಜನೆಗಳ ಅಡಿಯಲ್ಲಿ ತಮ್ಮಲ್ಲಿರುವ ನಿಧಿಗಳನ್ನು ಬಳಸಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಜೀತದಾಳುಗಳ ಪುನರ್ವಸತಿಗೆ ಯೋಜನೆಗಳನ್ನು ರೂಪಿಸಿ ಹಣ ಬಿಡುಗಡೆಗೊಳಿಸಬೇಕು ಮತ್ತು ತದನಂತರ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಅದನ್ನು ಪಡೆಯಬೇಕು.

ಕರ್ನಾಟಕ ಸರ್ಕಾರದ ಕ್ರಿಯಾಯೋಜನೆ 2008ರ ಪ್ರಕಾರ ರೂ.20,000ಗಳ ಜೊತೆಗೆ ಎಸ್.ಜಿ.ಎಸ್.ವೈ.ನಲ್ಲಿ ರೂ.30,000ದಷ್ಟು ಸಬ್ಸಿಡಿ ಸಾಲವನ್ನು ಕೊಟ್ಟು ಪುನರ್ವಸತಿ ಯೋಜನೆಗಳನ್ನು ರೂಪಿಸಬೇಕು.

ಪುನವರ್ಸತಿ ಸೌಲಭ್ಯಗಳನ್ನು ಪಡೆಯುವ ಜೀತದಾಳುಗಳನ್ನು ಅವರದೇ ಊರಲ್ಲಿ ಪ್ರತಿ 10–15 ಮಂದಿಗೊಂದರಂತೆ ಸ್ವ ಸಹಾಯ ಗುಂಪು ರಚನೆ ಮಾಡಬೇಕು. ಅದಕ್ಕೋಸ್ಕರ ಸ್ವಯಂ ಸೇವಾ ಸಂಸ್ಥೆಗಳಿಗೆ ನೆರವು

ನೀಡಬೇಕು. ಆ ಗುಂಪುಗಳನ್ನು ಬ್ಯಾಂಕುಗಳಿಗೆ ಜೋಡಿಸಿ ಬ್ಯಾಂಕುಗಳಿಂದ ಸಾಲ ಸೌಲಭ್ಯಗಳು ಸಿಗುವಂತೆ ನೋಡಿಕೊಳ್ಳಬೇಕು.

ಬಿಡುಗಡೆ ಹೊಂದಿದ ಮತ್ತು ವಸತಿ ರಹಿತ ಪ್ರತಿ ಜೀತದಾಳಿಗೆ ಆದ್ಯತೆ ಮೇರೆಗೆ ವಸತಿ ಸೌಲಭ್ಯ ಒದಗಿಸಬೇಕು.

ಬಡತನ ನಿರ್ಮೂಲನೆಯ ಪ್ರತಿಯೋಜನೆಯಲ್ಲಿ ವಿಮುಕ್ತ ಜೀತದಾಳಿಗೆ ಮೊದಲ ಆದ್ಯತೆ ಕೊಡಬೇಕು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾನೂನಿನಡಿ ವಿಮುಕ್ತ ಜೀತದಾಳುಗಳಿಗೆ ಉದ್ಯೋಗ ಒದಗಿಸಬೇಕು.

ಜೀತದಾಳುಗಳ ಮಕ್ಕಳಿಗೆ ಮತ್ತು ಬಾಲ ಜೀತದಾಳುಗಳಿಗೆ ಉಚಿತ ಗುಣಾತ್ಮಕ ಶಿಕ್ಷಣ ಸಿಗುವಂತೆ ನೋಡಿಕೊಳ್ಳಬೇಕು. ವಯಸ್ಕ ಜೀತದಾಳುಗಳಿಗೆ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ವಿಮುಕ್ತ ಜೀತದಾಳುಗಳಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸಬೇಕು. ಯಶಸ್ವಿನಿ ಅಥವಾ ಜನಶ್ರೀ ವಿಮಾ ಯೋಜನೆಯಡಿ ಆರೋಗ್ಯ ವಿಮೆ ಕಲ್ಪಿಸಬೇಕು.

ಜೀತದಾಳುಗಳ ಪುನರ್ವಸತಿ ಯೋಜನೆಗಳನ್ನು ಜೀತದಾಳುಗಳ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಂಡು ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ರೂಪಿಸಬೇಕು. ಇದಕ್ಕೋಸ್ಕರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತನ್ನ ಗ್ರಾಮ ಪಂಚಾಯತಿಯ ಎಲ್ಲಾ ವಿಮುಕ್ತ ಜೀತದಾಳುಗಳನ್ನು ಒಟ್ಟಿಗೆ ಕರೆದು ಅವರ ಅಪೇಕ್ಷೆಗಳನ್ನು ಕಲೆ ಹಾಕಿ ಅವರಿಗೆ ಸೂಕ್ತವಾದ ಯೋಜನೆಗಳನ್ನು ರೂಪಿಸಬೇಕು. ಅಥವಾ ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ತಾಲ್ಲೂಕಿನ



ಎಲ್ಲಾ ಜೀತದಾಳುಗಳನ್ನು ಒಂದು ಕಡೆ ಸೇರಿಸಿ ಅವರವರ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಯೋಜನೆಗಳನ್ನು ರೂಪಿಸಬಹುದು. ರೂಪಿಸಿದ ಯೋಜನೆಗಳನ್ನು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಮಂಜೂರಾತಿಗೆ ಕಳುಹಿಸಬೇಕು. ಈ ಎಲ್ಲಾ ಪ್ರಕ್ರಿಯೆಗಳು ಜೀತದಾಳುಗಳನ್ನು ಬಿಡುಗಡೆಗೊಳಿಸಿದ ಎರಡು ತಿಂಗಳುಗಳಲ್ಲಿ ಮುಗಿದು ಎರಡು ತಿಂಗಳ ಒಳಗಾಗಿ ವಿಮುಕ್ತ ಜೀತದಾಳುಗಳಿಗೆ ಪುನರ್ವಸತಿ ಸೌಲಭ್ಯ ಸಿಗುವಂತಾಗಬೇಕು.

❖ ❖ ❖ ❖ ❖

- ✓ ***ಜೀತ ಪದ್ಧತಿ ಅಳಿಯಲಿ, ಮಾನವೀಯತೆ ಬೆಳಗಲಿ***
- ✓ ***ಜೀತ ವಿಮುಕ್ತಿ, ದೇಶಕ್ಕೆ ಶಕ್ತಿ....***
- ✓ ***ಜೀತ ಸಾಕು...... ಭೂಮಿ ಬೇಕು.........***
- ✓ ***ನಿಲ್ಲಲಿ ನಿಲ್ಲಲಿ, ಜೀತ ಪದ್ಧತಿ ನಿಲ್ಲಲಿ***
- ✓ ***ಜೀತ ಬಿಡಿಸಿ, ಶಾಲೆಗೆ ಕಳಿಸಿ***
- ✓ ***ಜೀತ ಪದ್ಧತಿ ಮಾನವ ಕುಲಕ್ಕೆ ಅಂಟಿದ ಶಾಪ ..........ಬನ್ನಿ ಅದನ್ನು ತೊಡೆದು ಹಾಕಲು ಶ್ರಮಿಸೋಣ***